ನನಗಿಂತ ಸುಮಾರು ಎರಡು ದಶಕಗಳಷ್ಟು ಹಿರಿಯರಾದ ಶ್ರೀನಿವಾಸವೈದ್ಯ (04 ಏಪ್ರಿಲ್ 1936 – 21 ಏಪ್ರಿಲ್ 2023) ಅವರೊಂದಿಗಿನ ನನ್ನ ಸ್ನೇಹ ಎರಡು ದಶಕಗಳಿಗೂ ಮೀರಿದ್ದು. ಸಾಹಿತ್ಯದಿಂದ ಆರಂಭಗೊಂಡು ತೀರಾ ಖಾಸಗಿ ಅನ್ನುವ ಕಾನೂನು ನೆರವಿನವರೆಗೂ ಅವರು ನನ್ನೊಂದಿಗೆ ಸಂಪರ್ಕದಲ್ಲಿದ್ದರು.

ಬಹುಕಾಲ ಅವರು ಬ್ಯಾಂಕಿನ ಅಧಿಕಾರಿ. ನಿವೃತ್ತಿ ಹತ್ತಿರವಾಗುತ್ತಿದ್ದಾಗ ಬರೆಯಹೊರಟವರು. ಬಹುತಡವಾಗಿ ಬರಹದ ಪ್ರಪಂಚಕ್ಕೆ ಬಂದವರು. ಅಡಿಕೆ ಬೆಳೆಗಾರರಿಗೆ ಗೊತ್ತಿರಬಹುದಾದಂತೆ ಹಳತಿಗೆ ಇಟ್ಟ ಅಡಿಕೆಗೆ 'ಚೋಲ್' ಎಂದು ಹೆಸರು. ಅದನ್ನು ಬಹಳ ತಡವಾಗಿ ಮಾರಲಾಗುತ್ತದೆ. ಅದಕ್ಕೆ ಹೊಸ ಅಡಿಕೆಗಿಂತ ಹೆಚ್ಚು ಬೆಲೆ. ಎರಡು ವರ್ಷಗಳಷ್ಟು ಹಳತಾದರೆ ಅದಕ್ಕೆ 'ಡಬಲ್ ಚೋಲ್' ಎನ್ನುತ್ತಾರೆ. ಅದಕ್ಕೆ ಬೆಲೆ ಇನ್ನೂ ಹೆಚ್ಚು. ಕಾಳುಮೆಣಸೂ ಹೀಗೆಯೇ ಎಂದು ತೋರುತ್ತದೆ. ವೈದ್ಯರು ಈ ಡಬಲ್ ಚೋಲ್ ಬರಹಗಾರರು. ಅನುಭವ ಸಂಪತ್ತನ್ನು ಸಮೃದ್ಧವಾಗಿ ಸಂಗ್ರಹಿಸಿ ಶೇಖರಿಸಿ ಅಟ್ಟದಲ್ಲಿಟ್ಟವರು; ವ್ಯಾವಹಾರಿಕ ಬದುಕಿನಿಂದ ಬಾಳಿಗೆ ಕಾಲಿಟ್ಟಾಗ ಅದನ್ನು ಚಾಲ್ತಿಗೆ ತಂದವರು. (ಅವರ ವೃತ್ತಿ ಜೀವನದ ಕುರಿತು ಅವರ ಕೊನೆಯ ಕೃತಿ 'ಇನ್ನೊಂದು ಸಂತೆ'ಯಲ್ಲಿ ಕೆಲವು ಹನಿಗಳಿವೆ.)

ಮೊದಲಿಗೆ ಅವರು ಹಾಸ್ಯ ಬರಹಗಾರರೆಂದು ಮತ್ತು ನಗೆ ಭಾಷಣಗಾರರೆಂದು ಪ್ರಸಿದ್ಧರಾದವರು. ಅವರ ಗೆಳೆಯ ಅಪರಂಜಿ ಶಿವು (ರಾ.ಶಿ. ಅವರ ಮಗ) ಅವರೊಂದಿಗೆ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಗೆಯ ಹೊಳೆಯನ್ನು ಹರಿಸುತ್ತಿದ್ದರು; ಮಳೆಯನ್ನು ಸುರಿಸುತ್ತಿದ್ದರು. ಪ್ರಾಯಶಃ ಅವರ ಈ ನಗೆಚಟಾಕಿಯ ಗೀಳು ಅಲ್ಲದಿದ್ದರೆ ನನಗೆ ಅವರ ಪರಿಚಯವಾಗುತ್ತಿರಲಿಲ್ಲವೇನೋ?

ಪುತ್ತೂರಿನಲ್ಲಿ 'ಉಗ್ರಾಣ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಬೆಳಗ್ಗೆ ಪ್ರಶಸ್ತಿ ಭಾಜನರಾದ ಅಮರೇಶ ನುಗಡೋಣಿಯವರ ಅಭಿನಂದನಾ ಭಾಷಣ ಮಾಡುವುದಕ್ಕಾಗಿ ನನ್ನನ್ನು ಆಹ್ವಾನಿಸಿದ್ದರು. ಸಾಂಸ್ಕೃತಿಕ ಕಾರ್ಯಕ್ರಮವೆಂಬಂತೆ ಅದಾದ ಬಳಿಕ ಒಂದು ಕವಿಗೋಷ್ಠಿ ಮತ್ತು ಅನಂತರ ನಗೆಭಾಷಣಗಳ ಕಾರ್ಯಕ್ರಮವಿದ್ದವು. ವೈದ್ಯರು, ಶಿವು, ಕು.ಗೋ., ಮುಂತಾದವರು ನಕ್ಕುನಗಿಸಿದರು. ನನ್ನ ಭಾಷಣ ಚೆನ್ನಾಗಿತ್ತು ಎಂದು ಎಲ್ಲರೂ ಹೇಳಿದರೂ ಅದನ್ನು ಮರೆಸುವಷ್ಟು ನಗೆಗಡಲಿನಲ್ಲಿ ಇಡೀ ಸಭೆಯೇ ಮುಳುಗಿತ್ತು. ಅವರೆಲ್ಲರ ಪರಿಚಯವಾದರೂ ಅದು ಸಾಂದರ್ಭಿಕ ಔಪಚಾರಿಕತೆಯೇ ಹೊರತು ಹೆಚ್ಚೇನೂ ಆಗಿರಲಿಲ್ಲ. ಇದು ನಡೆದದ್ದು 2001ರ ಡಿಸೆಂಬರ್ 16ರಂದು. ಆಶ್ಚರ್ಯಕರವೆಂಬಂತೆ, 2002ರ ಜನವರಿ 4ರ ಅವರ ಪತ್ರ ನನ್ನ ಕೈಸೇರಿತು. ಈ ಪತ್ರಕ್ಕೆ ಕಾರಣ ಅವರೇ ಹೇಳಿದಂತೆ, 'ಪುತ್ತೂರಿನಲ್ಲಿ ಉಗ್ರಾಣ ಪ್ರಶಸ್ತಿ ಪ್ರದಾನ' ಸಂದರ್ಭದಲ್ಲಿ ನಾವು ಭೇಟಿಯಾಗಿದ್ದುದು. ಅಷ್ಟೇ ಪರಿಚಯ. "ಅವತ್ತು ನಿಮ್ಮ ವಿಶ್ಲೇಷಣೆಯಿಂದ ತುಂಬ ಪ್ರಭಾವಿತನಾಗಿದ್ದೆ. ಇವತ್ತು ಕನ್ನಡ ಪ್ರಭದಲ್ಲಿ ತಾವು ಬರೆದ 'ಮುಚ್ಚಿದ ಮನಸ್ಸುಗಳು' ಓದಿ ಮೆಚ್ಚಿಕೊಂಡೆ. ಈ ಮೊದಲು ತಮ್ಮ 'ಪಂಪನಿಗೆಲ್ಲಿ ಪಂಪ ಪ್ರಶಸ್ತಿ?' ಕೂಡ ಓದಿ ಮೆಚ್ಚಿದ್ದೆ" ಎಂದು ಬರೆದಿದ್ದರು. ಇವಿಷ್ಟೇ ಆಗಿದ್ದರೆ ಅದು ನನ್ನ ಹೊಗಳಿಕೆಗೆ ಸೀಮಿತವಾಗುತ್ತಿತ್ತು. ಅದನ್ನು ನಾನಿಲ್ಲಿ ಹೇಳಿದರೂ ಅದು ನಾರ್ಸಿಸಮ್ಮಿನ ವಾದವಾಗುತ್ತಿತ್ತು. ಆದರೆ, ಅವರು ಮುಂದುವರಿಸಿ ಹೀಗೆ ಬರೆದರು:

"ಆಕಸ್ಮಿಕವೆಂಬಂತೆ, ಇತ್ತೀಚೆಗೆ vulgarise ಎನ್ನುವ ಮಟ್ಟಕ್ಕೆ ಇಳಿಯುತ್ತಿರುವ ಪ್ರಶಸ್ತಿ ಪುರಸ್ಕಾರಗಳು–ಶಾಲುಸತ್ಕಾರಗಳು ಇವುಗಳ ಹಿಂದೆ ನಡೆಯುವ 'ಪ.ಪ.ಬೆ.ತು.ಸಂ.' (ಪರಸ್ಪರ ಬೆನ್ನು ತುರಿಸುವ ಸಂಘಗಳ) ಅಸಹ್ಯ ಚಟುವಟಿಕೆಗಳೂ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಸೋಗಿನಲ್ಲಿ ಮೆರೆಯುವ ನಮ್ಮ ಆಷಾಢಭೂತಿ ಬುದ್ಧಿಜೀವಿಗಳ ಸಮಾಜಘಾತುಕ ಆಟಗಳೂ ನನ್ನ ಮನಸ್ಸನ್ನು ತೀರ ಕಲಕಿದೆ.

ಎಷ್ಟೋ ಸಲ ಇವುಗಳ ಬಗ್ಗೆ ಬರೆಯಬೇಕೆಂದುಕೊಂಡಿದ್ದೆ. ಆಗಿರಲಿಲ್ಲ. ನನ್ನನ್ನು ಆಳವಾಗಿ ಕಲಕಿದ ಎರಡೂ ವಿಷಯಗಳ ಬಗ್ಗೆ ತಾವು ತುಂಬ ಸಮತೋಲ ಚಿತ್ತದಿಂದ ಭಾವೋದ್ವೇಗಕ್ಕೆ ಒಳಗಾಗದೇ ಬರೆದಿದ್ದೀರಿ. ನಿಮ್ಮ ವೈಚಾರಿಕತೆಯ ಮಟ್ಟವನ್ನೂ ನಿಮ್ಮ ಶಬ್ದ ಸಂಪತ್ತನ್ನೂ ಬಹಳವಾಗಿ ಮೆಚ್ಚಿಕೊಂಡಿದ್ದೇನೆ".

ನಾನು ಆ ನಗೆಭಾಷಣಗಾರನ ಸಂವೇದನಾಶೀಲತೆಯ ಉತ್ಕಟತೆಯನ್ನು ಗಮನಿಸಿ